ನಾನು ಪುನರ್ಜನ್ಮ ಚಿಕಿತ್ಸಕ. ಹಿಪ್ನೋಟೈಸ್ ಮಾಡಿ ನಿಮಗೆ ನಿಮ್ಮ ಹಿಂದಿನ ಜನ್ಮಗಳ ನೆನಪು ಬರುವಂತೆ ಮಾಡುತ್ತೇನೆ. ಅದರಿಂದ ನಿಮ್ಮ ಕಾಯಿಲೆ ವಾಸಿಯಾಗುತ್ತದೆ. ನಿಮ್ಮ ಸಮಸ್ಯೆಗಳು ಪರಹಾರವಾಗುತ್ತವೆ' ಎಂದು ಹೇಳುವವರು, ಜಾಹೀರಾತು ಕೊಟ್ಟು, ಟಿವಿಯಲ್ಲಿ ಡೆಮೋ ಮಾಡುವ ಗುರೂಜಿಗಳು, ಚಿಕಿತ್ಸಕರು ಹೆಚ್ಚುತ್ತಿದ್ದಾರೆ. ಮೊದಲು ಒಂದು ಟಿವಿ ಚಾನೆಲ್‌ಗೆ ಸೀಮಿತವಾಗಿದ್ದ ಇಂತಹ ಡೆಮೋ ಕಾರ್ಯಕ್ರಮಗಳು ಹಲವಾರು ಚಾನೆಲ್‌ಗಳಿಗೆ ಲಗ್ಗೆ ಇಟ್ಟಿವೆ. ಇವರನ್ನು ನಂಬಿ, ಈ ಚಿಕಿತ್ಸೆಗೆ ಹೋಗುವವರ ಸಂಖ್ಯೆಯೂ ಹೆಚ್ಚುತ್ತಿದೆ. ದುಬಾರಿ ಬೆಲೆಯ ಈ ಚಿಕಿತ್ಸೆ ಎಷ್ಟು ಪರಿಣಾಮಕಾರಿ? ಅಥವಾ ಇದೆಲ್ಲ ಬರೀ ಬುರುಡೆಯೇ?

ನಾವು ಭಾರತೀಯರು ಕರ್ಮಸಿದ್ಧಾಂತ, ಪುನರ್ಜನ್ಮ ಸಿದ್ಧಾಂತದಲ್ಲಿ ನಂಬಿಕೆಯುಳ್ಳವರು. ದೇಹಕ್ಕೆ ಅಳಿವುಂಟು. ಆತ್ಮಕ್ಕೆ ಅಳಿವಿಲ್ಲ. ಅದು ಅವಿನಾಶಿ ಎನ್ನುತ್ತೇವೆ. ಸತ್ಕರ್ಮಗಳನ್ನು ಮಾಡಿದರೆ ಒಳ್ಳೆಯ ಪುನರ್ಜನ್ಮ. ದುಷ್ಕರ್ಮ–ದುರಾಚಾರಗಳನ್ನು ಮಾಡಿದರೆ ಮುಂದಿನ ಜನ್ಮದಲ್ಲಿ ಕಾಯಿಲೆ. ಕಷ್ಟಗಳು ನಮ್ಮನ್ನು ಕಾಡುತ್ತವೆ. ಯಾವ ತಂದೆ–ತಾಯಿಗೆ ಹುಟ್ಟುತ್ತೇವೆ, ಯಾವ ಜಾತಿ–ವರ್ಗದಲ್ಲಿ ಹುಟ್ಟುತ್ತೇವೆ. ಅಂಗವೈಕಲ್ಯ– ಅನಿಷ್ಟ ಕಾಯಿಲೆಗಳು ಬರುವುದು ಪೂರ್ವ ಜನ್ಮಗಳ ಕರ್ಮಫಲ ಎಂಬುದು ಜನಜನಿತವಾಗಿದೆ. ಧಾರ್ಮಿಕ ನಾಯಕರು, ಪೂಜಾರಿ, ಜ್ಯೋತಿಷ್ಯರು ಇದನ್ನು ವ್ಯವಸ್ಥಿತವಾಗಿ ಪ್ರಚಾರ ಮಾಡಿದ್ದಾರೆ. ಪುನರ್ಜನ್ಮಕ್ಕಾಗಲೀ, ಕರ್ಮ ಸಿದ್ಧಾಂತಕ್ಕಾಗಲೀ ವೈಜ್ಞಾನಿಕ ಆಧಾರವಿಲ್ಲ ಅಥವಾ ಈ ಆಸಕ್ತ ಜನ ಕೊಡುವ ಪುರಾವೆಗಳು ನಂಬಲು ಅರ್ಹವಲ್ಲ.

### ಹಿಪ್ನೋಟಿಸಂ ಅಂದರೆ ಏನು?

ಜನ ಒಳ್ಳೆಯ ಕೆಲಸಗಳನ್ನು ಮಾಡಲಿ. ಕೆಲವು ಕೆಲಸಗಳನ್ನು ಮಾಡಲು ಹಿಂಜರಿಯಲಿ, ದುರಾಚಾರ ಮಾಡಲು ಹೆದರಲಿ ಎಂದು ನಮ್ಮ ಹಿರಿಯರು ಈ ಕರ್ಮ ಸಿದ್ಧಾಂತವನ್ನು ಮಾಡಿದರು. ಈ ಸಿದ್ಧಾಂತದ ಉಪಯೋಗದ ಜೊತೆಗೇ ದುರುಪಯೋಗವೂ ಆಗುತ್ತಿದೆ. ಮೇಲ್ವರ್ಗದವರು, ಶ್ರೀಮಂತರು, ಅಧಿಕಾರದಲ್ಲಿರುವವರು ತಾವು ಹಿಂದಿನ ಜನ್ಮಗಳಲ್ಲಿ ಪುಣ್ಯದ ಕೆಲಸ ಮಾಡಿದ್ದೆವು ಎಂದು ಬೀಗುತ್ತಾರೆ. ಬಡವರನ್ನು, ಕೆಳವರ್ಗದ ಜನರನ್ನು, ದಲಿತರನ್ನು ನೀವು ಹಿಂದಿನ ಜನ್ಮಗಳಲ್ಲಿ ಪಾಪ ಮಾಡಿ, ಈಗ ನೋವು, ಕಷ್ಟ, ಅಪಮಾನಗಳನ್ನು ಅನುಭವಿಸುತ್ತಿದ್ದೀರಿ. ಅನುಭವಿಸಿ. ಯಾರೇನು ಮಾಡಲಾದೀತು ಎಂದು ಅವರನ್ನು ಹೀನಾಯವಾಗಿ ನೋಡುತ್ತಾರೆ. ಎಗ್ಗಿಲ್ಲದೆ ಶೋಷಣೆ ಮಾಡುತ್ತಾರೆ. ಮೇಲ್ವರ್ಗದ ಜನರ ಈ ಅಹಂಕಾರ, ಈ ಕ್ರೌರ್ಯಕ್ಕೆ ಇಂಬು ಕೊಡುವ ಕರ್ಮ ಸಿದ್ಧಾಂತವನ್ನು ಕೈಬಿಡುವುದೇ ಕ್ಷೇಮ.

ಪುನರ್ಜನ್ಮ ಚಿಕಿತ್ಸಕನ ಬಳಿಗೆ ಹೋಗುವ 'ಹೈಸಜೆಸ್ಟಿಬಿಲಿಟಿ' ಇರುವ ವ್ಯಕ್ತಿಯು ಪುನರ್ಜನ್ಮ ಸಿದ್ಧಾಂತದಲ್ಲಿ ನಂಬಿಕೆ ಇಟ್ಟು ಹಿಪ್ನಾಟಿಕ್ ಸ್ಥಿತಿಯಲ್ಲಿ ತನಗೆ ಪುನರ್ಜನ್ಮದ ಬಗ್ಗೆ ನೆನಪುಗಳು ಬರುತ್ತವೆ ಅಥವಾ ಚಿಕಿತ್ಸಕ ಬರಿಸುತ್ತಾನೆ ಎಂದು ನಂಬಿ ಚಿಕಿತ್ಸೆ ಪಡೆಯಲು ಮಾನಸಿಕ ಸಿದ್ಧತೆ ಮಾಡಿಕೊಳ್ಳುತ್ತಾನೆ. ಸಮ್ಮೋಹನ ಸ್ಥಿತಿಯಲ್ಲಿ, ಚಿಕಿತ್ಸಕ ನೀಡುವ ಮನೋ ಸೂಚನೆಗಳನ್ನು ಪಾಲಿಸಲು ರೆಡಿಯಾಗುತ್ತಾನೆ. 'ಈಗ ನೀನು ಒಂದು ಹಿಂದಿನ ಜನ್ಮದ ಬಗ್ಗೆ ನೆನೆಸಿಕೋ' ಎಂದು ಚಿಕಿತ್ಸಕ ಹೇಳಿದ ಕೂಡಲೇ, ವ್ಯಕ್ತಿ ಹಿಂದಿನ ಜನ್ಮದ ಕೆಲವು ವಿವರಗಳನ್ನು ಕಲ್ಪನೆ ಮಾಡಿಕೊಂಡು ಹೇಳ ತೊಡಗುತ್ತಾನೆ. 'ಹೌದು, ನಾನು ಒಂದು ಹಸುವನ್ನು


